International Journal of Kannada Research
www.kannadajournal.com

**ISSN: 2454–5813**
IJSR 2016; 2(2): 44-45
© 2016 IJKS
www.kannadajournal.com
Received: 06-02-2016
Accepted: 17-03-2016

**ಅನುಪಮಾ ಸಿ. ಉತ್ನಾಳ**
ಸಂಶೋಧನಾ ವಿದ್ಯಾರ್ಥಿ

**ರಾ.ಚ.ವಿ.ಬೆಳಗಾವಿ**
ಸಂಶೋಧನಾ ವಿದ್ಯಾರ್ಥಿ

**ಕರ್ನಾಟಕ**
ಸಂಶೋಧನಾ ವಿದ್ಯಾರ್ಥಿ

**Correspondence**
**ಅನುಪಮಾ ಸಿ. ಉತ್ನಾಳ**
ಸಂಶೋಧನಾ ವಿದ್ಯಾರ್ಥಿ

# ಬುದ್ಧ ಸಮಾಜಕ್ಕೆ ನೀಡಿದ ಮೌಲ್ಯಗಳು (ಸಂದೇಶಗಳು)

**ಅನುಪಮಾ ಸಿ. ಉತ್ನಾಳ, ರಾ.ಚ.ವಿ.ಬೆಳಗಾವಿ, ಕರ್ನಾಟಕ**

**ಪ್ರಸ್ಥಾವನೆ:**

ಬೌದ್ಧ ಧರ್ಮ ಜಗತ್ತಿನ ಅತ್ಯಂತ ಪ್ರಾಚೀನವಾದದ್ದು. ಬೌದ್ಧ ಮತದ ಗುರಿ ಮಾನವ ಮತ್ತು ಮಾನವೀಯತೆ ಸರ್ವಸಮಾನತೆಯಿಂದ, ಅಂತರಾಳದ ಪ್ರೀತಿ ಸದ್ಭಾವನೆಗಳಿಂದ ಪ್ರತಿಯೊಬ್ಬರ ಉದ್ಧಾರ ಸರ್ವೋದಯದ ತತ್ವಸಾರ. ಮನುಷ್ಯರು ದುಃಖದಾರಿದ್ರ್ಯ ಸಂಕಟಗಳಲ್ಲಿ ನಲುಗುತ್ತಿದ್ದಾರೆ. ಯುದ್ಧ ಭಯೋತ್ಪಾದನೆಗಳ ಕಪಿಮುಷ್ಠಿಗೆ ಸಿಲುಕಿ ಬೇಯುತ್ತಿರುವ ಇಂದಿನ ಸಮಾಜಕ್ಕೆ ಗೌತಮ ಬುದ್ಧನ ತತ್ವಗಳ ಸಂದೇಶ ಹೆಚ್ಚು ಪ್ರಸ್ತುತವಾಗಿದೆ. ಮಾನವ ಕುಲವನ್ನು ಗೆಲ್ಲುವ, ಮಾನವ ಬದುಕನ್ನು ಆಲಂಗಿಸುವ, ಮಾನವ ಬದುಕನ್ನು ಬೆಳೆಸುವ ಈ ಮೂರು ಕಾರ್ಯಗಳು ಸಾರ್ಥಕವಾಗುವಲ್ಲಿ ಬುದ್ಧನ ಸಂದೇಶಗಳು ಅವಶ್ಯಕವಾಗಿ ಬೇಕೆ ಬೇಕು. ಸಮಾಜವನ್ನು ಆರೋಗ್ಯಕರವಾಗಿ ಮುನ್ನಡೆಸಲು ಬುದ್ಧನ ಸಂದೇಶಗಳು ಹೆಚ್ಚು ಸೂಕ್ತವಾಗಿವೆ.

**ಉದ್ದೇಶ:**

ಪ್ರಾಚೀನ ಮಹಾವಿಭೂತಿಯ ವಿಜ್ಞಾನ ಸಮ್ಮತವಾದ ಮಹಾದರ್ಶನವನ್ನು ಕನ್ನಡಿಗರು ಪಡೆದುಕೊಳ್ಳಬೇಕಾದ ಅವಶ್ಯಕವಿದೆ. ಇಪ್ಪತ್ತೊಂಬತ್ತನೇಯ ವಯಸ್ಸಿನಲ್ಲಿಯೇ ಸರ್ವಸಂಗ ಪರಿತ್ಯಾಗಿಯಾಗಿ, ಏಳು ವರ್ಷಗಳ ಕಾಲ ಕಠೋರ ತಪಸ್ಸಾದನೆಯಲ್ಲಿ ತೊಡಗಿ, ಮಾನವನ ದುಃಖ ಕಾರಣವನ್ನೂ ಪರಿಹಾರವನ್ನೂ ಕಂಡುಕೊಳ್ಳುವ ಮೂಲಕ ಜ್ಞಾನದ ಬೆಳಕನ್ನು ಸಾಕ್ಷಾತ್ಕರಿಸಿಕೊಂಡ ಮೇರು ಸದೃಶ ಮಹಾಪುರಷನವನು. ಸತ್ಯನಿಷ್ಠ ವಿಚಾರವಾದಿ ಹಾಗೂ ಕರುಣಾ ಮೂರ್ತಿ ಮಾನವತಾವಾದಿ ಆ ಬುದ್ಧ. ಶರಣತ್ರಯ, ಪಂಚಶೀಲ, ಸತ್ಯಚತುಷ್ಠಯ ಮತ್ತು ಅಷ್ಟಾಂಗಮಾರ್ಗಗಳ ಮೂಲಕ  ಭೇದರಹಿತ ಸರ್ವೋದಯ ಸಮಾಜವನ್ನು ನಿರ್ಮಿಸಿದ ಪರಮತಸಹಿಷ್ಣು ಗೌತಮ ಬುದ್ಧ. ಲೋಕದ ಕ್ಷಣಿಕತೆ ಹಾಗೂ ಅನಿತ್ಯತೆಗಳನ್ನು ಬೋಧಿಸುತ್ತಲೇ ಪ್ರೀತಿ, ಮೈತ್ರಿ, ಅನುಕಂಪ, ತ್ಯಾಗ ಮುಂತಾದ ಮಾನವೀಯ ಮೌಲ್ಯಗಳ ಚಿರಂತನತೆಯನ್ನು ಪ್ರತಿಪಾದಿಸಿದ ಬುದ್ಧ ಲೋಕದ ಶ್ರೇಷ್ಠ ಆದರ್ಶಗಳ ಸಾಕಾರ ರೂಪನಾಗಿದ್ದಾನೆ. ಜಾತಿ, ಮತ, ವರ್ಗ, ವರ್ಣ ಮೊದಲಾದ ಮಾನವ ನಿರ್ಮಿತ ಸಂಕಲೆಗಳನ್ನು ಮುರಿದೊಗೆದು, ಸಮಸ್ತ ಮನುಕುಲ ನಿರ್ವಾಣದ ದಾರಿಯನ್ನು ತೋರುವ ಉದ್ದೇಶವಾಗಿತ್ತು.

ತಾನು ಕಂಡ ಜ್ಞಾನದ ಬೆಳಕನ್ನು, ಸತ್ಯದರ್ಶನವನ್ನು, ಧಾರ್ಮಿಕ ಸಿದ್ಧಾಂತಗಳನ್ನು ಲೋಕ ಕಲ್ಯಾಣಾರ್ಥವಾಗಿ ಜನ ಹೃದಯದಲ್ಲಿ ಬಿತ್ತಲು ಪರಿವ್ರಾಜಕನಾದ ಜಗತ್ತಿನ ಪ್ರಪ್ರಥಮ ಧರ್ಮಚಕ್ರ ಪ್ರವರ್ತಕನವನು. ಶಿಷ್ಯರೊಡನೆ ಊರಿಂದರೂರಿಗೆ ನಡೆದು ಹೋಗುತ್ತಾ, ಒಂದು ಹೊತ್ತಿನ ಊಟವನ್ನು ಭಿಕ್ಷೆಯಿಂದ ಪೂರೈಸುತ್ತ, ಜನಸಂದಣಿಗೆ ಉಪದೇಶವನ್ನು ನೀಡುತ್ತ, ಮುಂದೆ ಮುಂದೆ ಸಾಗುತ್ತಾನೆ. ಸಂಘ ನಿಯಮದ ಪ್ರಕಾರ ಭಿಕ್ಷು ಮೂರು ಚೀವರ, ಒಂದು ಪಾತ್ರೆ, ಸೂಜಿ, ಸೊಂಟದದಾರ, ನೀರು ಸೋಸುವ ಬಟ್ಟೆ ಮತ್ತು ಚಾಕು– ಇಷ್ಟನ್ನು ಮಾತ್ರ ಹೊಂದಿರತಕ್ಕದ್ದು. ಇಂದಿನ ಸನ್ಯಾಸಿಗಳಂತೆ ಅವರು ಸರ್ವ ಭೋಗ ಸಂಪನ್ನರಲ್ಲ.

ರಾಜನಾಗಿ ಮೆರೆಯಬೇಕಾದವನು ನಡುರಾತ್ರಿ ಎದ್ದು ಲೋಕೋದ್ಧಾರಕ್ಕಾಗಿ ಸರ್ವವನ್ನು ತ್ಯಾಗ ಮಾಡಿ (ಪದವಿ, ಹೆಂಡತಿ, ಮಗ) ಹೊರಬಂದವನು. ಈ ರೀತಿಯಾಗಿ ಸಮಾಜವನ್ನು ಮುಕ್ತ ಮನಸ್ಸಿನಿಂದ ಒಪ್ಪಿಕೊಂಡು ತಿದ್ದುತ್ತಾ ತನ್ನ ಉದ್ಧೇಶವನ್ನು ಸಾಕಾರಗೊಳಿಸುತ್ತಾ ಸಂಘಗಳನ್ನು ನಿರ್ಮಾಣ ಮಾಡಿ ಎಲ್ಲ ದಿಕ್ಕುಗಳಿಗೂ ಧರ್ಮ ಸಂದೇಶಗಳನ್ನು ಬಿತ್ತಲು ಕಳಿಸಿ ಜಗತ್ತಿನ ಎಲ್ಲ ಗೊಂದಲ ತಳಮಳ ಹಾಗು ಸಂಘರ್ಷಗಳನ್ನು ತೊಡೆದು ಹಾಕುವ ಮಹತ್ ಉದ್ದೇಶ ಹೊಂದಿತಾನು.

**ಬುದ್ಧ ಸಮಾಜಕ್ಕೆ ನೀಡಿದ ಸಂದೇಶಗಳು:**

ಬುದ್ಧ ತಾನು ಪಡೆದುಕೊಂಡ ಜ್ಞಾನದ ಸವಿಯನ್ನು ಎಲ್ಲರಿಗೂ ಉಣಬಡಿಸಲು ಹೋರಾಡಿದಾತ. ಸ್ವೀಕರಿಸುವರೆ ಸುಲಭದಲಿ ಜನರು ಆ ತತ್ವಗಳನು? ಮುಂಚಿನಿಂದಲೂ ದೈವದ ಬಂಧನದಲ್ಲಿರುವ ಜನರು ಸುಲಭ ಸಾಧ್ಯವಲ್ಲ ಕಳಚುವದು ಕರ್ಮ ವಿಧಿ ಸಂಕಲೆಗಳನ್ನು.

ಸ್ವಾರ್ಥ ಅಹಃ ಭಾವದಲ್ಲಿ ಮುಳುಗಿ ಭಿಗುತ್ತಿರುವ ಜನರನ್ನು ಸಮ್ಮತಿಸಿ ಸರಿಯಾದ ಮಾರ್ಗಕ್ಕೆ ತಂದು ಹಚ್ಚುವದು ಸುಲಭದ ಮಾತಾಗಿರಲಿಲ್ಲ. ಮೋಹಾಂಧ ಜನರಿಗೆ ತನ್ನ ಜ್ಞಾನ ಧಾರೆ ಎರೆಯಲು ಕಷ್ಟದ ಹಾದಿ ತುಳಿಯಲು ಸಿದ್ಧನಾದ ತನ್ನಲ್ಲೆ ನಿಶ್ಚಯಿಸಿ 'ಗಾಳಿಗೊಡ್ಡಿದ ಸೊಡರಂತೆ ಇದ್ದವನ ಚಿತ್ತ ನಿಶ್ಚಲ ಮಾಡಿಕೊಂಡು, ನೆಲದಾಳಕೆ ನೆಟ್ಟ ಶಿಲಾ ಸ್ತಂಭದಂತೆ ಭದ್ರನಾಗಿ' ಜೀವನ ಸಂದೇಶಗಳನ್ನು ಭಿತ್ತರಿಸಲು ಸಂಚಾರ ಮಾಡ ತೊಡಗಿದನು.

- ವೃದ್ಧ, ರೋಗಿ, ಶವ, ಸನ್ಯಾಸಿ ಈ ನಾಲ್ಕು ದೃಶ್ಯಗಳು ರಾಜನಾದ ಸಿದ್ಧಾರ್ಥ ಬುದ್ಧನಾಗಲು ಕಾರಣವಾಯಿತು. ಈ ಸತ್ಯ ಸಂಗತಿಯನ್ನು ತಿಳಿದ ಬುದ್ಧ ಜನರಲ್ಲಿರುವ ಅಜ್ಞಾನ ಮೌಢ್ಯತೆಯನ್ನು ಬಿಡಿಸಿ ಹೊಸ ಜ್ಞಾನದ ಬೆಳಕನ್ನು ನೀಡಿದ. ಜನನ, ಜರಾ, ರೋಗ, ಮರಣಗಳೆಂಬ ದುಃಖ ಮೂಲಗಳು ಬಿಡದೆ ನಮ್ಮನ್ನು ಬಂಧಿಸುವವು, ಮನುಜರನ್ನು ಮುಳ್ಳು ಸರಪಳಿಗಳಂತೆ ನೋಯಿಸುತ್ತಾ ಅದಕ್ಕಾಗಿ ಅಕ್ಷರ ಜ್ಞಾನ ಪಡೆಯಲು ಗುರಿಯೆಡೆಗೆ ಮೊದಲ ಹೆಜ್ಜೆ, ದುಃಖ ಅರಿತು ಕಾರಣವ ತಿಳಿಯುವದು ಮತ್ತೊಂದು ಹೆಜ್ಜೆ, ಆ ಕಾರಣವನ್ನು ನಿರೋಧಿಸುವ ಮಾರ್ಗವನು ಅರಿತು ಸಾಗಬೇಕು ಆಗ ಜನರು ಉನ್ನತ ಮಾರ್ಗದಲ್ಲಿ ಜೀವನ ನಡೆಸಲು ಸಾಧ್ಯವಾಗುತ್ತದೆ.
- ಬುದ್ಧ ಮನುಕುಲದ ಉದ್ಧಾರಕ ಸಮಸ್ತ ಮಾನವ ಜನಾಂಗದ ಏಳಿಗೆಯನ್ನು ಬಯಸಿದವ. ವಿಶ್ವ ಕಲ್ಯಾಣವೇ ಗುರಿಯಾಗಿತ್ತು. ಸಮಾಜ ಸುಧಾರಣೆ, ಸಮಾನತೆ, ಮಾನವ ಕಲ್ಯಾಣ, ಬಿದ್ದವರನ್ನು ಉದ್ಧರಿಸುವುದು, ದಲಿತೊದ್ಧಾರ, ಮುಕ್ತ ಸಮಾಜ, ಸ್ವಾಭಿಮಾನಿ ಸ್ವಾವಲಂಬಿಯಾಗಿ ಬದುಕ ನಡೆಸಲು ಹೇಳಿದಾತ.
- ಯಜ್ಞಯಾಗಾದಿಗಳು, ಪ್ರಾಣಿ ಬಲಿಗಳನ್ನು ನಿರಾಕರಿಸಿದನು. ಸಾತ್ವಿಕ ಆಹಾರ, ಸಾತ್ವಿಕ ಜೀವನಕ್ಕೆ ಒತ್ತು ಕೊಟ್ಟವನು. ಸರ್ವಾದಿಕಾರಿ ನಿಲುವನ್ನು ಪ್ರತಿಭಟಿಸಿ ಜನ ಸಾಮಾನ್ಯರ ನೋವುಗಳಿಗೆ ಸ್ಪಂದಿಸಿ ಸಾಮಾನ್ಯ ಜನರ ಕಲ್ಯಾಣಕ್ಕಾಗಿ ತನ್ನ ಬದುಕನ್ನು ಸವೆಸಿದನು. ಚತುರ್ವರ್ಣಗಳನ್ನು ನಿರಾಕರಿಸಿ ವರ್ಣವರ್ಗಗಳನ್ನು ಅಳಿಸಿ ಹಾಕಲು ಹೋರಾಟ ಮಾಡಿದ. ಭಾಷೆ ವಿಷಯದಲ್ಲು ಅಷ್ಟೇ ಬುದ್ಧ ತನ್ನ ಸಮಕಾಲಿನ ಭಾಷೆಗಳಾದ ಸಂಸ್ಕೃತದ ಹಿರಿಮೆ ನಿರಾಕರಿಸಿದ. ಪ್ರಾಕೃತ ಅರ್ಧಮಾಗದಿಗಳನ್ನು ಬದಿಗಿಟ್ಟು ಜನಸಾಮಾನ್ಯರಾಡುವ 'ಪಾಲಿ' ಭಾಷೆಯನ್ನೆ ಎತ್ತಿಕೊಂಡು ತನ್ನ ತತ್ವ ಸಿದ್ಧಾಂತ ಉಪದೇಶಗಳನ್ನು ಭೊದಿಸಿದ. ತನ್ನ ವಿಚಾರಧಾರೆ ಜನಸಾಮಾನ್ಯರಿಗೆ ತಲುಪಬೇಕೆಂಬ ಉದ್ದೇಶದಿಂದ ಸ್ಥಳೀಯ ಭಾಷೆಗೆ ಒತ್ತುಕೊಟ್ಟ.
- 'ಬುದ್ಧಂ ಶರಣಂ ಗಚ್ಚಾಮಿ' 'ಧರ್ಮಂ ಶರಣಂ ಗಚ್ಚಾಮಿ' ಎಂದು ಧರ್ಮ ಪ್ರಸಾರಗೊಳಿಸಿದ. ಬುದ್ಧನ ಭೋದೆ ತ್ರಿಪಿಟಕಗಳಲ್ಲಿ ಅಡಕವಾಯಿತು. ಜನಸಾಮಾನ್ಯರ ಬದುಕನ್ನು ಹಸನುಗೊಳಿಸಲು ಶ್ರಮಿಸಿ ಪರಂಪರಾಗತ ದೇವರು, ಧರ್ಮ, ಯಜ್ಞಯಾಗಾದಿಗಳನ್ನು ನಿರಾಕರಿಸಿದ. ಬುದ್ಧ ಮನುಷ್ಯನಲ್ಲಿಯೇ ದೈವತ್ವವನ್ನು ಕಾಣಲು ಹೇಳಿದ. ಇಹಲೋಕಕ್ಕೆ ಒತ್ತುಕೊಟ್ಟು ಪರಲೋಕದ ಗೊಡವೆ ಬೇಡೆಂದು ಸಾರಿದ.
- 'ಹೋರಾಡಿ ಗೆಲ್ಲಬಹುದು ರಣಾಂಗಣದಿ, ಆದರೆದುರಿಸಿ ಜಯಿಸುವುದು ಸಸಾರವಲ್ಲವು ಬಾಳ ಸಮರದಲ್ಲಿ', ಜನಿಸಿದರೆಲ್ಲರಿಗೂ ಸಾವು, ಬದುಕಿದೆಲ್ಲರಿಗೂ ಜರೆಯು! ಅರಸ, ಪ್ರಜೆ, ಅಧಿಕಾರ, ಉಚ್ಚ, ನೀಚ ನಿಯಮವಿಲ್ಲವಿದಕೆ. ನೂರಾರು ಜನ್ಮಗಳು ಬಂದರು ಹಿಂಗದಿಹವು 'ನಾನೂ' ನನದೆಂಬ ಮಮಕಾರ ಭಾವಗಳು ಅರಿವಿನ ಅಗ್ನಿ ನಮಗೆ ತಾಗುವವರಗೂ ಈ ಭವದ ಕೊಂಡಿ ಹರಿದು ಹೋಗದೆ ಬಿಗಿ ಉರುಳಾಗಿ ಕಾಡುತ್ತದೆ. 'ಜನನ ವೃಕ್ಷಕ್ಕೆ ಮರಣವೇ ಫಲವು' ಹೊರತಲ್ಲವದಕೆ ಯಾವ ಜೀವಿಗಳೂ! ಮಣ್ಣಿನ ದೇಹ ಮರಳಿ ಸೇರುವುದು ಮಣ್ಣಿನಲಿ. ಪಂಚಭೂತಗಳ ಕಾಯ ಮತ್ತೆ ಬೆರೆಯುವುದು ಅವುಗಳಲಿ. ಹೊರಡಬೇಕು ಎಲ್ಲರೂ ಆಯುಷ್ಯ ಮುಗಿದೊಡನೆ. ಇಂದವರು ನಾಳೆ ನಾವು ಸಾಗುತ್ತೆವೆ ಸರತಿಯಲ್ಲಿ ಒಬ್ಬರ ಹಿಂದೊಬ್ಬರು! ಈ ಸತ್ಯವನ್ನು ಕಿಸಾಗೊತಮಿಯ ಮೂಲಕ ಬುದ್ಧ ನಮಗೆ ತಿಳಿ ಹೇಳಿದ್ದಾನೆ.
- ಮಹಿಳೆಯ ಸ್ಥಾನಮಾನ ವಿವೇಚಿಸಿದಾತ. ಆದಿಯಿಂದಲೂ ಅಬಲೆಯೆಂದು, ಎಂದೋ ಯಾವಾಗಾಲೋ ಭುವಿಯಲ್ಲಿ ಅಂಕುರಿಸಿದ ಸ್ತ್ರೀಶೋಷಣೆಯ ವಿಷದ ಬಳ್ಳಿಯನ್ನು ದೈತ್ಯವಾಗಿ ಬೆಳೆಯಲು ಬಿಡದೆ ಸಮಾಜರಥದೆರಡು ಚಕ್ರಗಳಾಗಿದ್ದು ಸ್ತ್ರೀ ಪುರುಷರು, ದೊರಕಬೇಕವಳಿಗೆ ಸಮಾನ ಸ್ಥಾನ ಮಾನಗಳು ಉದ್ಧರಿಸಬೇಕು ತುಳಿತಕ್ಕೆ ಒಳಗಾಗಿಹ ಅವಳನ್ನು ವಿದ್ಯೆಯ ಕಣ್ತೊದಗಿಸಬೇಕು, ಅವಳಿಗೆ ಅಂಟಿರುವ ಕೀಳರಿಮೆಯನ್ನು ತೊಡೆದು ದುಡಿಯಬೇಕು ಗಂಡು ಹೆಣ್ಣಗಳು ಜೊತೆಗೂಡಿ ಸ್ವಾವಲಂಬಿಗಳಾಗಿ. ಆಗ ದೇಶ ಸಿರಿ ಸಮೃದ್ಧವಾಗಿ ಸುಭಿಕ್ಷ ಒದಗುವುದು ದೇಶದಲೆಲ್ಲಾ.
- 'ಆಸೆಯೇ ದಃಖಕ್ಕೆ ಕಾರಣ' ಮಾನವ ತನ್ನ ಆಸೆಯನ್ನು ಹಿಡಿತದಲ್ಲಿ ಇಟ್ಟುಕೊಳ್ಳುವುದಕ್ಕೆ ಆಗದೆ 'ಬೇಕು' ಎನ್ನುವ ಹಠದಲ್ಲಿ ಪರಿತಪಿಸುತ್ತದ್ದಾನೆ, 'ಸಾಕು' ಎನ್ನು ಧೋರಣೆ ಬಂದಾಗ ನೆಮ್ಮದಿಯ ಬದುಕು ಕಟ್ಟಿಕೊಳ್ಳಲು ಸಾಧ್ಯ. ಕೊನೆಯಿರದ ಆಸೆಯ ಬೆನ್ನು ಹತ್ತಿದರೆ ಅನ್ಯಾಯದ ಮಾರ್ಗ ತುಳಿಯಲು ಪ್ರೇರೆಪಿಸುತ್ತದೆ. ಅದಕ್ಕಾಗಿ ಬುದ್ಧ ಆಸೆಯನ್ನು ನಿಗ್ರಹಿಸು ಎಂದುಸಾರಿಹೇಳಿದ.

**ಸಮಾರೋಪ:**

ಇಂದು ಮಾನವ ಜಗತ್ತಿನ ಮುಂದೆ ಇರುವದು ಎರಡೆ ಮಾರ್ಗ ಒಂದು ಸರ್ವೋದಯ; ಮತ್ತೊಂದು ಸರ್ವನಾಶ. ಮಾನವ ಜಗತ್ತಿನ ಅಳಿವು ಉಳಿವುಗಳು ನಾವು ಆರಿಸಿಕೊಳ್ಳುವ ಯುದ್ಧ ಅಥವಾ ಶಾಂತಿಯ ಮಾರ್ಗವನ್ನು ಅವಲಂಬಿಸಿವೆ. ನಾವಿಂದು ಬುದ್ಧನ ತತ್ವಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಸಕಲ ಜೀವರಾಶಿಗಳ ಒಳಿತಿಗಾಗಿ ಬದುಕನ್ನು ಕಟ್ಟುವ ಕೆಲಸಕ್ಕೆ ಕೈಜೋಡಿಸಬೇಕಾಗಿದೆ. ಬುದ್ಧನ ಅಂತಿಮಕಾಲದ ಬೋಧನೆ ಎಲ್ಲ ಧರ್ಮದವರಿಗೂ ಅನ್ವಯಿಸುತ್ತದೆ. 'ನೀವಾಗಿ ಪರಧರ್ಮ ಸಹಿಸ್ಣುಗಳು, ಗೌರವಿಸಿ ಅನ್ಯಮತೀಯರಲಿ ಇರುವಂತಹ ಸದ್ಗುಣ ವಿಚಾರಗಳನು' ಎನ್ನುವ ಮಾತುಗಳನ್ನು ಎಲ್ಲರೂ ಪಾಲಿಸುವುದಾದರೆ ಲೋಕಶಾಂತಿ ಖಂಡಿತ ಪ್ರಾಪ್ತವಾಗುತ್ತದೆ.

**ಆಧಾರ ಗ್ರಂಥಗಳು:**

1. ಬುದ್ಧ ಮಹಾದರ್ಶನ– ಡಾ. ಲತಾ ರಾಜಶೇಖರ.
2. ಮಹಾರಾತ್ರಿ (ನಾಟಕ) – ಕುವೆಂಪು
3. Gautam Buddha: The life and teachings of the Awakened one (English) - Vishvapani Blomfield